
# ಅನುಬಂಧ ಭಾಗ

# ಕೆಲ ಹೆರೋದರು

ಈ ಕೆಳಗಿನ ಹೆರೋದ ಚಕ್ರವರ್ತಿಯ ಮೂವರು ಮಕ್ಕಳನ್ನು (ಬೇರೆ ಬೇರೆ ಹೆಂಡತಿಯರಲ್ಲಿ ಒಬ್ಬೊಬ್ಬರಂತೆ) ಸೂಚಿಸುವುದಾಗಿದೆ ಮತ್ತು ಅವರಲ್ಲಿ ಇಬ್ಬರು ಆತನ ಸಂತತಿಯವರಲ್ಲಿ ಒಬ್ಬರಾಗಿದ್ದಾರೆ. ಅಂತಿಯೋಪ್ಪದ ಹೆರೋದನ ಜೊತೆ ಈ ಹೆರೋದ್ಯಳ ಸಂಬಂಧವನ್ನು ತಿಳಿಯಲು ಈ ಪಟವು ಸಹಾಯಿಸುವುದಾಗಿದೆ.




“ಹೆರೋದ ಪಿಲಿಪ್ಸ್ I” ಲೂಕ 3:1ರಲ್ಲಿ ಸೂಚಿತವಾದ ಅರಸನಲ್ಲ. ಹೆರೋದ ಪಿಲಿಪ್ಪಿಯು ರೋಮಾಕ್ಕೆ ಗಡಿಪಾರು ಮಾಡಲ್ಪಟ್ಟವನು ಆಗಿದ್ದನು. ಸಲೊಮೆಯು ಹೆರೋದ್ಯಳು ಮತ್ತು ಹೆರೋದ ಪಿಲಿಪ್ಪನ ಮಗಳಾಗಿದ್ದಳು ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

# ಗಲಿಲಾಯ ಸಮುದ್ರ

ಗಲಿಲಾಯ ಸಮುದ್ರವು ಯೋರ್ದನ್ ನದಿಯ ಉತ್ತರ ಕೊಳ್ಳದೆಡೆಯಲ್ಲಿ ಇದು ಹಳೆಯ ಒಡಂಬಡಿಕೆಯಲ್ಲಿ ಕಿನ್ನೆರೇತ್ ಸಮುದ್ರ (ಅಥವಾ ಕಿನ್ನೆರೋತ್) ಎಂದು ಕರೆಯಲ್ಪಡುತ್ತಿದ್ದು (ಅರಣ್ಯಕಾಂಡ 34:11: ಯೆಹೋಶುವ 12:3: 13:27) ನಂತರ ಪಟ್ಟಣ ಮತ್ತು ಜಿಲ್ಲೆ ಸ್ಥಾನಪಡೆದು ಹೆಸರಾಯಿತು (ಯೆಹೋಶುವ 19:35; 1 ಅರಸು 15:20). ಗಲಿಲಾಯ ಪ್ರಾಂತದ ನಂತರ ಹೊಸ ಒಡಂಬಡಿಕೆಯಲ್ಲಿ ಇದು ಸಾಮಾನ್ಯವಾಗಿ ಗಲಿಲಾಯ ಸಮುದ್ರ ಎಂದು ಕರೆಯಲ್ಪಡುತ್ತಿದೆ. ಲೂಕನು ಇದನ್ನು ಗೆನೆಜರೇತ್ ಕೆರೆ ಎಂದು ಹೆಸರಿಸಿದ್ದಾನೆ (ಲೂಕ 5:1). ಗೆನೆಜರೇತ್ ಅದರ ಪಶ್ಚಿಮದ ಪ್ರದೇಶವಾಗಿದೆ (ಮತ್ತಾಯ 14:34). ಈ ಸಮುದ್ರವು ನಂತರದಲ್ಲಿ ತಿಬೇರಿಯ ಸಮುದ್ರವೆಂದೂ ಕರೆಯಲ್ಪಡುತ್ತದೆ (ಯೋಹಾನ 6:1; 21:1), ಆ ಹೆಸರನ್ನು ಪಡೆದ ಆ ಪಟ್ಟಣವು ಅದರ ಪಶ್ಚಿಮದ ದಂಡೆಯ ಮೇಲೆ ಸಿಕ್ಕುವದು. ಆ ಗಲಿಬಿಲಿಯನ್ನು ಹೋಲಾಡಿಸಲು, ಈ ನೀರಿನ ಪಾತ್ರವು ಗಲಿಲಾಯ ಸಮುದ್ರದಂತೆ ಎಂದು ನಾವು ಸಾಮಾನ್ಯವಾಗಿ ಸೂಚಿಸುವವರಾಗಿದ್ದೇವೆ.


ಈ ಸಮುದ್ರವು ಪಿಯರ್ ಹಣ್ಣಿನ ಆಕಾರದಲ್ಲಿದ್ದು, ಸುಮಾರು ಹದಿಮೂರರಿಂದ ಏಳು ಮೈಗಳವರೆಗಿನ ಅಳತೆಯನ್ನು ಹೊಂದಿದ್ದು ಸಮುದ್ರಮಟ್ಟದಿಂದ ಏಳನೂರು ಅಡಿ ಕೆಳಗಿದೆ. ಅದರ ಆಳವು ಸುಮಾರು 150 ಅಡಿ ಆಗಿದೆ. ಅದು ಗುಡ್ಡ ಮತ್ತು ಬೆಟ್ಟಗಳಿಂದ ಸುತ್ತುವರೆದಿದ್ದು, ಆರನೂರ ಸಾವಿರ ಅಡಿಗಳ ಎತ್ತರಕ್ಕಿಂತ ಹೆಚ್ಚು ಏರುವಂತದ್ದಾಗಿತು. ಕೆಲ ಸಂದರ್ಭಗಳಲ್ಲಿ ಎತ್ತರದ ಮೇಲ್ಮೈಯಲ್ಲಿ ತಂಪಾದ ಗಾಳಿಯು ಸಮುದ್ರದೆಡೆಗೆ ಬೀಸಿ, ಅದರ ಮೇಲ್ಮೈಯ ಮೇಲೆ ಬಡಿದು ಬಲವಾದ ತೆರೆಗಳನ್ನು ತರತ್ತಿತ್ತು.

ಸಮುಧ್ರವು ನೀರನ್ನು ಪಡೆಯುವದನ್ನೂ ಮತ್ತು ತೂರುವದು ಎರಡನ್ನೂ ಮಾಡುವುದರಿಂದ, ಅದರ ನೀರು ಶುದ್ಧವೂ ಮತ್ತು ಸ್ವಚ್ಛವೂ ಆಗಿದ್ದು ಮೀನುಗಳಿಂದ ಸಮೃದ್ಧಿಯಾಗಿರುವದು (ಮೃತ್ಯು ಸಮುದ್ರವನ್ನು ತದ್ವಿರುದ್ಧವಾಗಿ). ಕ್ರಿಸ್ತನ ಸಮಯದಲ್ಲಿ, ಅದು ಪಟ್ಟಣಗಳಿಂದ ಸುತ್ತುವರೆದಿದ್ದು ಮೀನುಗಳು ಅದರ ಆಳದಿಂದ ಎಳೆಯದು ಸಿದ್ಧ ಮಾರುಕಟ್ಟೆಯನ್ನು ಒದಗಿಸುವದಾಗಿತ್ತು. "ಸಾವಿರಾರು ದೋಣಿಗಳು ಮೀನುಗಾರಿಕೆಗೆ, ಸಾಗಾಣಿಕೆ, ಮತ್ತು ಅಲ್ಹಾದಕರ ವಾತಾವರಣಕ್ಕೆ ಮತ್ತು ಸಮುದ್ರದ ಮೇಲ್ಮೈ ಮೇಲೆ ಸಾಗಲು, ಹೀಗೆ ಸಮಸ್ತ ಪ್ರದೇಶವು ಸಾಮರ್ಥ್ಯ ಮತ್ತು ಐಶ್ವರ್ಯದ ಮೇಲೆ ಬೆಳಕು ಬೀರುವುದಾಗಿತ್ತು."[1]

---

ಟಿಪ್ಪಣೆ

[1]James Stalker, *The Life of Jeuse Christ* (Chicago: Fleming H. Revell Co., 1981), 59.


ದಾನೂ
ಗಲಿಲಾಯ
ಹಾರ್ಸ್
ಮತ್ತು
ಹತ್ತಿನ್
ಕಪೆರ್ನೌಮು
ಗೆನೆಜರೇತ್
ಕೆರೆ
ಗಲಿಲಾಯ
ಸಮುದ್ರ
ಕಾನ?
ನಜರೇತ
ತಿಬೇರಿಯ
ಎಸದ್ರೇಲೋನ್ ಇಳಕಲಿನ ಪ್ರದೇಶ
ಸಮಾರ್ಯ

# ಅಪೊಸ್ತಲರು

**ಪೇತ್ರ** - ಈತನು ಸಿಮೋನನೆಂದೇ ಹೆಸರಾಗಿದ್ದಾನೆ. ಆತನ ಹೆಸರು ಕೇಫನೆಂದು ಬದಲಾಯಿಸಲ್ಪಟ್ಟಿತು ಇದರ ಅರ್ಥ "ಬಂಡೆ" ಎಂದಾಗಿದೆ. ಆತನು ಯೆಹೂದಿಗಳ ಮಧ್ಯದಲ್ಲಿ ಸೇವೆಯನ್ನು ನಿರ್ವಹಿಸಿದನು ಮತ್ತು 1 ಮತ್ತು 2 ಪೇತ್ರ ಪುಸ್ತಕವನ್ನು ಬರೆದನು. ಮಾರ್ಕನ ಸುವಾರ್ತೆಯನ್ನು ಬರೆಯುವಲ್ಲಿಯೂ ಕೂಡಾ ಆತನು ಸಹಾಯಿಸಿದನು.

**ಆಂದ್ರೇಯನು** - ಆತನು ಪೇತ್ರನ ಸಹೋದರ ಮತ್ತು ಯೇಸುವಿಗೆ ಪರಿಚಯಿಸಲ್ಪಟ್ಟವನು (ಯೋಹಾನ 1:40-42). ಈ ಸಹೋದರರು ಬೆತ್ಸದಾದ ಮೀನುಗಾರರು ಆಗಿದ್ದರು.

**ಯಾಕೋಬ** - ಈತನು ಯೋಹಾನನ ಸಹೋದರನು. ಇವರಿಬ್ಬರು ಜೆಬುದಾಯ ಸಲೋಮೆಯರ ಮಕ್ಕಳಾಗಿದ್ದರು ಮತ್ತು ಬೆತ್ಸದಾದಲ್ಲಿ ತಮ್ಮ ತಂದೆಯೊಡನೆ ಕೆಲಸ ಮಾಡುತ್ತಿದ್ದರು. ಕೆಲ ಸಾರಿ "ದೊಡ್ಡ" ಯಾಕೋಬ ಎಂದು ಕರೆಯಲ್ಪಡುವ ಈ ಯಾಕೋಬನು ಯೆರೂಸಲೇಮು ಮತ್ತು ಯುದಾಯದಲ್ಲಿ ಬೋಧಿಸಿದ್ದನು. ಹೆರೋದನಿಂದ ಕ್ರಿ.ಶ. 44ರಲ್ಲಿ ಕೊಲ್ಲಲ್ಪಟ್ಟು ಈತನು ಮೊದಲ ಹತಸಾಕ್ಷಿಯಾದ ಅಪೊಸ್ತಲ ಎನ್ನಿಸಿದ್ದಾನೆ.

**ಯೋಹಾನ** - ಈತನು ಯಾಕೋಬನ ಸಹೋದರನಾಗದ್ದನು. ಇಬ್ಬರೂ ಮೀನುಗಾರರು ಆಗಿದ್ದು ತಮ್ಮ ತಂದೆಯ ಜೊತೆಗೆ ಇದ್ದರು (ಮಾರ್ಕ 1:19. 20). ಯೇಸು ಈ ಇಬ್ಬರು ಸಹೋದರರನ್ನು "ಸಿಡಿಲಿನ ಮರಿಗಳು" ಎಂದು ಕರೆದನು (ಮಾರ್ಕ 3:17). ಯೋಹಾನನು ಆಸ್ಯ ಸೀಮೆಯ ಸಭೆಗಳಲ್ಲಿ, ವಿಶೇಷವಾಗಿ ಎಫೆಸದ ಸಭೆಯ ಮಧ್ಯದಲ್ಲಿ ಸೇವೆ ಮಾಡಿದನು. ಕ್ರಿ.ಶ. 95ರಲ್ಲಿ, ಆತನ ಪ್ರಕಟಣೆ ಪುಸ್ತಕದಲ್ಲಿ ದಾಖಲಿತವಾದ ಹಾಗೆ ಪತ್ಮೋಸ್ ದ್ವೀಪಕ್ಕೆ ಗಡಿಪಾರು ಮಾಡಲ್ಪಟ್ಟನು. ಆತನ ಬರಹಗಳು ಯೋಹಾನನ ಸುವಾರ್ತೆ ಮತ್ತು 1, 2 ಮತ್ತು 3 ಯೋಹಾನನ ಪತ್ರಿಕೆಯು ಒಳಗೊಂಡಿವೆ.

**ಪಿಲಿಪ್ಪ** - ಈತನು ಬೆತ್ಸಾಯಿದದವನು. ಈತನು ನತಾನಿಯೇಲನಿಗೆ ಯೇಸುವಿಗೆ ಬಗೆಗೆ ಹೇಳಿದನು (ಯೋಹಾನ 1:44-46).

**ಬಾರ್ತಲೋಮಾಯ** - ಯೋಹಾನನ ಸುವಾರ್ತೆಯ ಪ್ರಕಾರ ಈತನು ಬಹುಶಃ ನತಾನಯೇ ನಾಗಿರಬೇಕು (ಯೋಹಾನ 1:44-46). ಈತನು ಗಲಿಲಾಯದ ಕಾನಾನಿನವನು.

**ತೋಮ** - ಈತನು ದಿದುಮನೆಂದು ("ಅವಳಿಗಳು") ಸಹ ಕರೆಯಲ್ಪಡುತ್ತಿದ್ದನು (ಯೋಹಾನ 11:16; 20:24; 21:2) ಆತನ ಮನೆಯ ಗಲಿಲಾಯದಲ್ಲಿ ಇತ್ತು. ಸಿರಿಯಾದ ಸಭೆಯ ಸಂಸ್ಥಾಪಕ ಎಂದೇ ಆ ಜನರಿಂದ ಪ್ರತಿಪಾದಿಸಲ್ಪಡುವ ಈತ ಪರ್ಶಿಯಾ ಮತ್ತು ಭಾರತಲ್ಲಿ ಸಭೆಯನ್ನು ಸಂಸ್ಥಾಪಿಸಲ್ಪಟ್ಟವನು ಎಂದು ಹೇಳಲಾಗುತ್ತಿದೆ.

**ಮತ್ತಾಯ** - ಈತನು ಲೇವಿಯನೂ ಮತ್ತು ಅಲ್ಫಾಯನ ಮಗನೂ ಎಂದು ಹೆಸರಾದವನು ಆಗಿದ್ದಾನೆ (ಮತ್ತಾಯ 9:9; ಮಾರ್ಕ 2:14). ಈತನು ಕಪೆರ್ನೌಮಿನವನಾಗಿದ್ದನು ಮತ್ತು ಸುಂಕದ ಸಂಹ್ರಾಕನಾಗಿದ್ದು ರೋಮಾ ಸರಕಾರಕ್ಕೆ ಸೇವೆ ಮಾಡುವವನಾಗಿದ್ದನು.

**ಯಾಕೊಬ** - ಕೆಲಸಾರಿ ''ಕಡಿಮೆ'' ಎಂದು ಕರೆಯಲ್ಪಟ್ಟ ಈ ಯಾಕೋಬನು ಅಲ್ಫಾಯನು ಮತ್ತು ಮರಿಯಳ ಮಗನಾಗಿದ್ದಾನೆ (ಮತ್ತಾಯ 10:3; 27:56). (ಯಾಕೋಬ ಮತ್ತು ಮತ್ತಾಯರು ಸಹೋದರರಾಗಿದ್ದಾರೆಯೇ? ನಮಗೆ ತಿಳಿಯದು.) ಈತನು ಗಲಿಲಾಯದವನಾಗಿದ್ದಾನೆ ಮತ್ತು ಯಾಕೋಬ ಪತ್ರಿಕೆಯ ಲೇಖಕನೂ ಆಗಿದ್ದಾನೆ.

**ತದ್ದಾಯನು** - ಯಾಕೋಬನ ಮಗನಾದ ಈತನು ಯೂದನು ಅಥವಾ ಯೂದ ಎಂದು ಕರೆಯಲ್ಪಡುತ್ತಾ (ಮತ್ತಾಯ 10:3; ಲೂಕ 6:16). ಈತನು ಗಲಿಲಾಯದವನಾಗಿದ್ದಾನೆ.

**ಮತಾಭಿಮಾನಿಯಾದ ಸಿಮೋನ** - ಕಾನಾನ್ಯನು ಎಂದು ಕರೆಯಲ್ಪಡುವ ಈತ ಇನ್ನೊಂದು ಅರ್ಥದಲ್ಲಿ ''ಮತಾಭಿಮಾನಿ'' ಎಂದಾಗಿದ್ದು ಅರೆಮಾಯ ಭಾಷೆಯಲ್ಲಿ ಭಾಷಾಂತರವು ''ಮತಾಭಿಮಾನಿ'' ಎಂದಾಗಿದೆ. ಸಿಮೋನನು ಗಲಿಲಾಯದವನಾಗಿದ್ದನು.

**ಇಸ್ಕರಿಯೋತ್ ಯೂದ** - ''ಇಸ್ಕರಿಯೋತ'' ಇದು ಯೂದಾಯದಲ್ಲಿನ ಕೆರಿಯೋತ್ ಪಟ್ಟಣದಿಂದ ಬಂದವನು ಎಂದು ಇದು ಬಹುಶಃ ಸೂಚಿಸುವುದಾಗಿದೆ. ಈತನು ಯೇಸುವಿಗೆ ಗುರು ದ್ರೋಹವನ್ನು ಎಸಗಿದನು ಮತ್ತು ನಂತರ ಆತ್ಮಹತ್ಯ ಮಾಡಿಕೊಂಡನು.


**ಮತ್ತೀಯನು** - ಇಸ್ಕರಿಯೋತ ಯೂದನ ಮರಣದ ಮರಣದ ನಂತರ, ಆತನ ಸ್ಥಾನದ ಬದಲಿಗೆ ಮತ್ತೀಯನು ಆರಿಸಲ್ಪಟ್ಟನು (ಅಪೊಸ್ತಲರ ಕೃತ್ಯಗಳು 1:26). ಮತ್ತೀಯನು ಯೇಸು ಮತ್ತು ಆತನ ಶಿಷ್ಯರೊಂದಿಗೆ ''ಯೋಹಾನನ ದೀಕ್ಷಾಸ್ನಾನದ ಆರಂಭದಿಂದ ಹಿಡಿದು ಯೇಸು ಕ್ರಿಸ್ತನು ಎತ್ತಲ್ಪಡುವವರೆಗೆ'' ಇದ್ದ ಅಪೊಸ್ತಲ ಎಂದು ನಮಗೆ ಅಪೊಸ್ತಲರ ಕೃತ್ಯಗಳು 1:22ರಿಂದ ತಿಳಿಯುತ್ತೇವೆ.

**ಪೌಲನು** - ಸೌಲ, ನಂತರದಲ್ಲಿ ಪೌಲನು ಸಭೆಯ ಹಿಂಸಕ ಎಂದು ಕರೆಯಲ್ಪಡುವ, ಅನ್ಯಜನಾಂಗದ ವಿಶೇಷ ಅಪೊಸ್ತಲನು ಈತ (ರೋಮಾಪುರ 11:13; 1 ಕೊರಿಂಥ 1:1; 9:1; 15:9; 2 ಕೊರಿಂಥ 12:12; ಗಲಾತ್ಯ 1:1; 1 ತಿಮೋಥೆ 2:7). ಯೇಸು ಆತನಿಗೆ ದಮಸ್ಕದ ಮಾರ್ಗದಲ್ಲಿ ದರ್ಶನಕೊಟ್ಟನು. ಈತನು ಹೊಸ ಒಡಂಬಡಿಕೆಯ ಅನೇಕ ಪತ್ರಿಕೆಗಳನ್ನು ಬರೆದಿದ್ದಾನೆ.

ಕರ್ತನಿಂದ ನೇಮಿಸಲ್ಪಟ್ಟ ವಾರ್ತಾವಾಹಕರು ಆತನ ಜೀವನ ಮತ್ತು ಪುನರುತ್ಥಾನದ ಬಗ್ಗೆ ವೈಯಕ್ತಿಕ ಸಾಕ್ಷಿಯನ್ನು ಕೊಡಬಲ್ಲರು. ಇಸ್ಕರಿಯೋತ ಯೂದನ ಸ್ಥಳದಲ್ಲಿ ಮತ್ತೊಬ್ಬರನ್ನು ಆಯ್ಕೆಗೊಂಡಾಗ, ಹೊಸ ಅಪೊಸ್ತಲನು ಯೇಸುವಿನೊಂದಿಗೆ ಮತ್ತು ಆತನ ಹಿಂಬಾಲಕರೊಂದಿಗೆ ಯೇಸುವಿನ ಸೇವೆಯ ಕಾಲದಲ್ಲಿ ಅವರೊಡನೆ ಇದ್ದವನಾಗಿರಬೇಕು (ಅಪೊಸ್ತಲರ ಕೃತ್ಯಗಳು 1:21). ಅನಂತರ ಯೇಸು ಪೌಲನಿಗೆ ಕಾಣಿಸಿಕೊಂಡು ಅನ್ಯರಿಗೆ ಅಪೊಸ್ತಲನಾಗುವಂತೆ ಅರ್ಹತೆಯನ್ನು ಉಂಟುಮಾಡಿದನು (ನೋಡಿ 1 ಕೊರಿಂಥ 15:8). ಇಲ್ಲಿ ಹೇಳಿರುವ ಹಲವು ವಿಷಯಗಳನ್ನು ಸೇಕರಿಸಲಾಗಿದೆ.

# ಈ ಪುಸ್ತಕದಲ್ಲಿ ನಮೂದಿತವಾದ ಕ್ರಿಸ್ತನ ಪ್ರಯಾಣಗಳು

| | |
|---|---|
| ಗಲಿಲಾಯದ ಶ್ರೇಷ್ಟ ಗಲಿಲಾಯ ಸೇವೆಯ ಆರಂಭ<br>(ಮತ್ತಾಯ 4:12; ಮಾರ್ಕ 1:14, 15; ಲೂಕ 4:14, 15) | ಗಲಿಲಾಯ |
| ಕಪೆರ್ನೌಮಿನಲ್ಲಿನ ಮನೆಮಾಡಿಕೊಂಡಿದ್ದು ಕಪೆರ್ನೌಮ<br>(ಮತ್ತಾಯ 4:13-17; ಲೂಕ 4:31) | ಕಪೆರ್ನೌಮು |
| ಕಪೆರ್ನೌಮಿನಲ್ಲಿ ಪೂರ್ಣಪ್ರಮಾಣದ ಶಿಷ್ಯತ್ವಕ್ಕೆ ಕರೆ<br>(ಮತ್ತಾಯ 4:18-22; ಮಾರ್ಕ 1:16-20; ಲೂಕ 5:1-11) | ಕಪೆರ್ನೌಮು |
| ಕಪೆರ್ನೌಮಿನಲ್ಲಿನ ಸಭಾಮಂದಿರದಲ್ಲಿ ದೆವ್ವ ಪೀಡಿತನ ವಾಸಿಯಾಗುವಿಕೆ<br>(ಮಾರ್ಕ 1:21-28; ಲೂಕ 4:31-37) | ಕಪೆರ್ನೌಮು |
| ಕಪೆರ್ನೌಮು ಮತ್ತು ಗಲಿಲಾಯದಲ್ಲಿ ಅನೇಕ ವಾಸಿಯಾಗುವಿಕೆಯ ಅದ್ಭುತ ಕಾರ್ಯ<br>(ಮತ್ತಾಯ 4:23-25; 8:14-17; ಮಾರ್ಕ 1:29-39; ಲೂಕ 4:38-44) | ಕಪೆರ್ನೌಮ ಮತ್ತು ಗಲಿಲಾಯ |
| ಕುಷ್ಟನು ಸ್ವಸ್ಥತೆ ಹೊಂದಿದ್ದು<br>(ಮತ್ತಾಯ 8:2-4; ಮಾರ್ಕ 1:40-45; ಲೂಕ 5:12-15) | ಗಲಿಲಾಯ |
| ಗಲಿಲಾಯದಲ್ಲಿ ಕುಷ್ಟ ಹಿಡಿದವನ ವಾಸಿಯಾಗುವಿಕೆ<br>(ಮತ್ತಾಯ 9:2-8; ಮಾರ್ಕ 2:1-12; ಲೂಕ 5:17-26) | ಕಪೆರ್ನೌಮು |
| ಮತ್ತಾಯನಿಗಾದ ಕರೆ; ಕಪೆರ್ನೌಮಿನಲ್ಲಿ ಮತ್ತಾಯನ ಔತಣಕೂಟ<br>(ಮತ್ತಾಯ 9:9-17; ಮಾರ್ಕ 2:13-22; ಲೂಕ 5:27-39) | ಕಪೆರ್ನೌಮು |
| ಯೆರೂಸಲೇಮಿನ ಬೆತ್ಸದಾ ಕೊಳದೆಡೆ ಸ್ವಸ್ಥತೆ<br>(ಯೋಹಾನ 5:2-47) | ಯೆರೂಸಲೇಮ |
| ಕಪೆರ್ನೌಮಿನಲ್ಲಿ ಸಬ್ಬತ್ತಿನ ಸಂಪ್ರದಾಯಗಳ ವಿರುದ್ಧ ಪ್ರತಿಪಾದನೆ<br>(ಮತ್ತಾಯ 12:1-14; ಮಾರ್ಕ 2:23-3:6; ಲೂಕ 6:1-11) | ಕಪೆರ್ನೌಮು |
| ಹನ್ನೆರಡು ಮಂದಿ ಅಪೊಸ್ತಲರನ್ನು ಆಯ್ಕೆ ಮಾಡಿದ್ದು<br>(ಮತ್ತಾಯ 10:2-4; ಮಾರ್ಕ 3:13-19; ಲೂಕ 6:12-19) | ಹಾರ್ಸ್ ಮತ್ತು ಹತ್ತಿನ್ (?) |
| ಪರ್ವತ ಪ್ರಸಂಗ<br>(ಮತ್ತಾಯ 5-7; ಲೂಕ 6:20-49) | ಹಾರ್ಸ್ ಮತ್ತು ಹತ್ತಿನ್ (?) |
| ಕಪೆರ್ನೌಮಿನಲ್ಲಿ ಶತಾಧಿಪತಿಯ ಆಳು ಸ್ವಸ್ಥವಾಗಿದ್ದು<br>(ಮತ್ತಾಯ 8:1, 5-13; ಲೂಕ 7:1-10) | ಕಪೆರ್ನೌಮು |
| ಗಲಿಲಾಯಾದ ವಿಧವೆಯ ಮಗನು ಸತ್ತವರೊಳಗಿಂದ ಎದದ್ದು<br>(ಲೂಕ 7:11-17) | ಗಲಿಲಾಯ |
| ಗಲಿಲಾಯದ ಎರಡನೆಯ ಗಲಿಲಾಯ ಪ್ರಯಾಣ<br>(ಲೂಕ 8:1-3) | ಗಲಿಲಾಯ |


ಯೇಸುವಿನ
ಸೇವೆಯಲ್ಲಿನ
ಪಾಲೇಸ್ತಿನ
ಸಿರಿಯ
ಸಿದೋನ್
ತೈರ್
ಫೊಣೀಕ್ಯ
ತ್ರಕೋನಿತ್ಸ್
ದಾನೂ
ಬಾಷಾನು
ಜಿಲ್ಲೆ
ಗಲಿಲಾಯ
ಕಪೆರ್ನೌಮು
ಹಾರ್ಸ್
ಮತ್ತು ಹತ್ತಿನ್
ಗಲಿಲಾಯ
ಸಮುದ್ರ
ಕಾನ?
ನಜರೇತ
ದೆಕೊಪೊಲ್ಯ
ಎಸದ್ರೋಲೀನ್
ಇಳಕಲಿನ
ಪ್ರದೇಶ
ಐನೋನ್?
ಸಲೀಮ್?
ಸಮಾರ್ಯ
ಮಹಾ ಸಮುದ್ರ
ಸುಖಾರು
ಗೆರ್ಶಮ್
ಬೆಟ್ಟ
ಯೋರ್ದನ್ ನದಿ
ಪೆರಿಯಾ
(“ಯೋರ್ದನ್ನಿನ
ಆಚೆ”)
ಯೆರೂಸಲೇಮ
ಬೆತ್ಲಹೇಮು
ಯೂದಾಯ
ಮೃತ
ಸಮುದ್ರ
ಇದುಮಾಯ

# ಮೂರು ದಿನ ಹಗಲು ಮತ್ತು ರಾತ್ರಿ (ಮತ್ತಾಯ 12:40)

ಯೇಸು ತನ್ನ ಸೂಚಕಕಾರ್ಯಗಳನ್ನು ಬಯಸುವವರಿಗೆ "... ಅಂದರೆ ಯೋನನು ಹೇಗೆ ಮೂರುದಿನ ರಾತ್ರಿ ಹಗಲು ದೊಡ್ಡ ಮೀನಿನ ಹೊಟ್ಟೆಯೊಳಗೆ ಇದ್ದನೋ ಹಾಗೆಯೇ ಮನುಷ್ಯ ಕುಮಾರನು ಮೂರುದಿನ ಹಗಲು ರಾತ್ರಿ ಭೂಗರ್ಭದೊಳಗೆ ಇರುವನು" ಎಂದು ಹೇಳಿದನು. (ಮತ್ತಾಯ 12:40). ಹೇಗೋ, ಯೇಸು ತನ್ನ ಶಿಷ್ಯರಿಗೆ ತನ್ನ ಪುನರುತ್ಥಾನದ ಬಗೆಗೆ ಹೇಳುವಾಗ, ತಾನು "ಮೂರನೆಯ *ದಿನದಲ್ಲಿ* ತಿರುಗಿ ಎಳುವುದಾಗಿ" ಹೇಳಿದನು (ಮತ್ತಾಯ 16:21; 17:23; 20:19; ಒತ್ತಿ ಹೇಳಿದ್ದು ನನ್ನದು), ಆತನ ಹೇಳಿಕೆಯ ಸಂಪೂರ್ಣತೆಯನ್ನು ಲೂಕ 24:6-8, 13-27ರಲ್ಲಿ ನಾವು ನೋಡುತ್ತೇವೆ.

ನಾವು ಹೇಳುವ ಮಟ್ಟಿಗೆ "ಯೇಸುವಿಗೆ ಒಂದು ಪೂರ್ಣದಿನ, ಎರಡು ಪೂರ್ಣರಾತ್ರಿಯ ಎರಡು ದಿನದ ಭಾಗವಾಗಿ ಸಮಾಧಿಯಲ್ಲಿ[1] ಇರಬೇಕಿತ್ತು." ಆದರೆ ಆತನು ಮೂರುದಿನ ಹಗಲುಎಂದು ಯಾಕೆ ಹೇಳಿದನು?

ಇದಕ್ಕೆ J. W. McGarvey ರವರು ವಿವರಣೆಯನ್ನು ಕೊಡುತ್ತಾರೆ:


> ... ಯೆಹೂದಿಗಳು ದಿನದ ಭಾಗವನ್ನು ಸರಣಿಯ ಆರಂಭದಲ್ಲಿ ಅಥವಾ ಕೊನೆಯಲ್ಲಿ ಬರುವಾಗ ಇದನ್ನು ಇಡೀದಿನವಾಗಿ ಎಣಿಸುವಾಗ [ಯೇಸು] ಸಮಾಧಿಯಲ್ಲಿ ಮೂರುದಿನ ಇರುವುದಾಗಿ ಸರಿಯಾಗಿ ಮಾತನಾಡಿದ್ದಾನೆ. ಯೇಹೂದಿಗಳು ಮೂರು ಅಂಕಗಳನ್ನು ಹೊಂದಿದ್ದಾರೆ ... : "ಮೂರನೆಯ ದಿನದಲ್ಲಿ" "ಮೂರನೆಯ ದಿನದ ನಂತರ" ಮತ್ತು "ಮೂರು ದಿನ ಹಗಲು ಮೂರದಿನರಾತ್ರಿ" ಇವೆಲ್ಲವು ಒಂದೇ ಸಂಗತಿ ಆಗಿವೆ: ಅದು ಮೂರುದಿನ ಹಗಲು ಎರಡರಲ್ಲಿ ಒಂದು ಪಾರ್ಶ್ವದಿನ ಆಗಿರಬಹುದು. ಸೂರ್ಯನು ಮುಳುಗುವುದಕ್ಕಿಂತ ಮೊದಲು ಎಣಿಕೆ ಆದದ್ದಾರೆ ಅವರಿಗೆ ಮೂರು ಪೂರ್ಣದಿನ ಮತ್ತು ರಾತ್ರಿ ಆಗಿಇವು ನಾಲ್ಕು ದಿನಗಳಾಗುತ್ತಿದ್ದು. ದಿನದ ಸರಿಯಾದ ಆರಂಭವು ಆಗುತ್ತಿತ್ತು. ನೋಡಿರಿ (1 ಅರಸು 12:5, 12; ಎಸ್ತೇರ 4:1, 16; ಮತ್ತಾಯ 27:63, 64).[2]

Nat Cooper ರವರು, ಯೇಸುವಿನ ಜೀವಿತದ ಕಡೆಯ ಭಾಗದಲ್ಲಿ ಹೊಂದಿದ ಮರಣದ ಮತ್ತು ಆತನು ಸಮಾಧಿಯಲ್ಲಿರಬೇಕಾದ ಮೂರು ಹಗಲು ಮತ್ತು ರಾತ್ರಿಯ ಚಾರ್ಟನ್ನು ತಯಾರಿಸಿ ಇರಿಸಿದ್ದಾರೆ.[3] ಅವರ ಚಾರ್ಟ ಈ ಕೆಳಗಿನಂತಿದೆ.

---

ಟಿಪ್ಪಣಿಗಳು

[1]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 306. We will discuss this in more detail when we study Jesus' resurrection. [2]Ibid. [3]Nat Cooper, *A Study of the Life of Christ* (Lubbock, Tex.: Sunset International Bible Institute, n.d.), 54.


ಶುಕ್ರವಾರ
ಪ್ರಾಥಕ್ಕಾಲ 6 ಘಂಟೆ
ಶನಿವಾರ
ಪ್ರಾಥಕ್ಕಾಲ 6 ಘಂಟೆ
ಭಾನುವಾರ
ಪ್ರಾಥಕ್ಕಾಲ 6 ಘಂಟೆ
ಕಾಯಫ
ಅನ್ನ
ಪಿಲಾತ
ಕ್ರೂಜಿಸಿದ್ದು
ಮುಂಜಾನ 9 ಗಂಟೆ
ಮಾರ್ಕ 15:25
ತೋಟ
ಮರಣ
ಮಧ್ಯಾಹ್ನ 3 ಗಂಟೆ
ಮತ್ತಾಯ 27:46-50;
ಮಾರ್ಕ 15:33-37;
ಲೂಕ 23:44-46
ಮೇಲ್ಮನೆ
ಸಮಾಧಿ
ಮಾರ್ಕ 15:42-46;
ಲೂಕ 23:50-54;
ಮತ್ತಾಯ 27:57-60
ಸಬ್ಬತ್
ಮತ್ತಾಯ 27:62;
ಲೂಕ 23:56
"ಆತನು ಎದಿದ್ದಾನೆ"
ಮತ್ತಾಯ 28:1-6;
ಮಾರ್ಕ 16:1-6;
ಲೂಕ 24:1-6;
ಯೋಹಾನ 20:1-8
ಈ ಚಾರ್ಟ ಯೆಹೂದಿ ಸಮಯವನ್ನು ಎಣಿಸುವುದಾಗಿದೆ. ಆ ಎಣಿಕೆಯ ಪ್ರಕಾರ ಸೂರ್ಯ ಮುಳುಗಲು ಆರಂಭಿಸುತ್ತಿದ್ದಂತೆಯೇ ಅಂದರೆ ಸುಮಾರು ಸಂಜೆ 6ಗಂಟೆಗೆ ಹೊಸದಿನವು ಆರಂಭವಾಗುತ್ತಿತ್ತು. ವೇದಭಾದಲ್ಲಿ ಬಳಿಕೆಯಾದ ("ಮೂರು ತಾಸು" ಮತ್ತು "ಒಂಬತ್ತನೆಯ ತಾಸು" ಎಂಬವು) ಆಧುನಿಕ ಪಾರಿಭಾಷೆಯ ಮೇಲೆ ಭಾಷಾಂತರವಾಗಿವೆ ("ಬೆಳಗಿನ 9ಗಂಟೆ" ಮತ್ತು "ಮಾಧ್ಯಾಹ್ನ 3ಗಂಟೆ").
ಸಂಜೆ 6 ಘಂಟೆ
ಸಂಜೆ 6 ಘಂಟೆ
ಸಂಜೆ 6 ಘಂಟೆ

**ವೇದಭಾಗದಲ್ಲಿ ಪಟ್ಟಿಯಾದಂತ ಅಪೊಸ್ತಲರು***

| *ಮತ್ತಾಯ 10:2-4* | *ಮಾರ್ಕ 3:16-19* | *ಲೂಕ 6:13-16* | *ಅಪೊಸ್ತಲರ ಕೃತ್ಯಗಳು 1:13* |
|---|---|---|---|
| ಸಿಮೋನ ಪೇತ್ರ | ಸಿಮೋನ ಪೇತ್ರ | ಸಿಮೋನ ಪೇತ್ರ | ಪೇತ್ರ |
| ಆಂದ್ರೇಯ | ಯಾಕೋಬ | ಆಂದ್ರೇಯ | ಯೋಹಾನ |
| ಯಾಕೋಬ | ಯೋಹಾನ | ಯಾಕೋಬ | ಯೋಹಾನ |
| ಯೋಹಾನ | ಆಂದ್ರೇಯ | ಯೋಹಾನ | ಆಂದ್ರೇಯ |
| ಪಿಲಿಪ್ಪ | ಪಿಲಿಪ್ಪ | ಪಿಲಿಪ್ಪ | ಪಿಲಿಪ್ಪ |
| ಬಾರ್ತಲೋಮಾಯ | ಬಾರ್ತಲೋಮಾಯ | ಬಾರ್ತಲೋಮಾಯ | ತೋಮ |
| ತೋಮ | ಮತ್ತಾಯ | ಮತ್ತಾಯ | ಬಾರ್ತಲೋಮಾಯ |
| ಮತ್ತಾಯ | ತೋಮ | ತೋಮ | ಮತ್ತಾಯ |
| ಅಲ್ಫಾಯನ ಮಗನಾದ ಯೋಕೋಬ | ಅಲ್ಫಾಯನ ಮಗನಾದ ಯಾಕೋಬ | ಅಲ್ಫಾಯನ ಮನಾದ ಯಾಕೋಬ | ಅಲ್ಫಾಯನ ಮಗನಾದ ಯಾಕೋಬ |
| ತದ್ದೀಯನು | ತದ್ದೀಯನು | ಮತಾಭಿಮಾನಿ ಸಿಮೋನ | ಮತಾಭಿಮಾನಿ ಸಿಮೋನ |
| ಮತಾಭಿಮಾನಿ ಸಿಮೋನ** | ಮತಾಭಿಮಾನಿ ಸಿಮೋನ | ಯಾಕೋಬನ ಮಗನಾದ ಯೂದ | ಯಾಕೋಬನ ಮಗನಾದ ಯೂದ |
| ಇಸ್ಕರಿಯೋತ ಯೋದ | ಇಸ್ಕರಿಯೋತ ಯೋದ | ಇಸ್ಕರಿಯೋತ ಯೋದ | |

*ಈ ರೀತಿ ಗುರುತಿಸಿದ ಸಾಲುಗಳ ವರ್ಗೀಕರಣವು 32 ಮತ್ತು 33ನೇ ಪುಟದಲ್ಲಿ ಚರ್ಚಿಸಲ್ಪಟ್ಟಿದೆ.

**"ಮತಾಭಿಮಾನಿ" ಎಂದು ಸೂಚಿಸುವುದಕ್ಕಾಗಿ ಮತ್ತಾಯ ಮತ್ತು ಮಾರ್ಕರಲ್ಲಿ ಗ್ರೀಕ್ ಭಾಷಾಂತರವು ವಿಭಿನ್ನ ಪದಗಳನ್ನು ಬಳಸಿದೆ (KJV ಯನ್ನು ನೋಡಿ), ಆದರೆ ಅದು ಅದೇ ತರದ ಅರ್ಥವನ್ನು ಕೊಡುವುದಾಗಿದೆ.